ತೆಗೆದುಕೊಂಡಿದ್ದೇನೆ. ಈ ಸಮ್ಮೇಳನವನ್ನು ಜೆ.ಎಚ್. ಪಟೇಲರು ಉದ್ಘಾಟಿಸುವ ಸುದ್ದಿ ಕೇಳಿ ಹೀಗೆ ಮಾಡಿದ್ದೇನೆ. ಈ ಪಟೇಲ್ ಎಂಬ ವ್ಯಕ್ತಿ ಭಾಗವಹಿಸುವ ಸಮಾರಂಭದಲ್ಲಿ ನಾನಿರುವುದು ನನ್ನಿಂದ ಸಾಧ್ಯವೇ ಇಲ್ಲ. ಪಟೇಲ್ ಮುಖ್ಯಮಂತ್ರಿ. ನಾನು ಸಾಮಾನ್ಯ. ಆದರೇನಂತೆ? ಈ ವ್ಯಕ್ತಿಯನ್ನು ಬಹಿಷ್ಕರಿಸುವ ಹಕ್ಕು ನನಗೂ ಇದೆ. ಒಂದು ವೇಳೆ ಅನಂತಮೂರ್ತಿ ಸಮ್ಮೇಳನ ಉದ್ಘಾಟನೆ ಮಾಡುತ್ತಿದ್ದರೂ ನಾನು ಇದೇ ನಿರ್ಣಯ ಕೈಗೊಳ್ಳುತ್ತಿದ್ದೆ ಅಂತ ಕಾಣುತ್ತದೆ... ಆದ್ದರಿಂದ ಸದ್ಯ ನಮ್ಮ ಭೇಟಿ ಇಲ್ಲ... ಈಗ ನೀವೀಕಡೆ ಬರುವುದಕ್ಕೆ ಕಾಯಬೇಕಾಗುತ್ತದೆ'' (27.11.1997).''

ಅವರು 1987ರ ಡಿಸೆಂಬರ್‌ನಲ್ಲಿ ಒಂದು ಸ್ವಾರಸ್ಯಕರ ಪತ್ರ ಬರೆದಿದ್ದರು. ತಮಗೆ ಚೆನ್ನಾಗಿ ಪರಿಚಯವಿರುವ ಕಥೆಗಾರನೊಬ್ಬನ ಭಾನಗಡಿ ಕುರಿತು! ಅದು ದೀರ್ಘ ಪತ್ರವಾಗಿರುವುದರಿಂದ ಸಂಕ್ಷಿಪ್ತಗೊಳಿಸಿ ಬರೆಯುವೆ. ಆ ಕಥೆಗಾರ ಯಾವುದೋ ಒಂದೇ ಸೆಮಿನಾರಿನಲ್ಲಿ ಇಬ್ಬರು ಮಹಿಳಾ ಸಾಹಿತಿಗಳ ಆಕರ್ಷಣೆಗೆ ಒಳಗಾಗಿ ಒಂದು ಕಾಂಪ್ಲೆಕ್ಸ್ ಸಿಚುವೇಶನ್‌ನಲ್ಲಿ ಸಿಕ್ಕಿ ಬೀಳುತ್ತಾನೆ! ಒಬ್ಬಳು ನೆಮ್ಮದಿಯಿಂದಿರುವ ಗೃಹಿಣಿ. ಸೆಮಿನಾರ್ ನಡೆದ ಊರಿನಲ್ಲೇ ಅವಳ ಮುಂಗೈಯನ್ನು ಹಿಡಿದು ಚುಂಬಿಸುವ ಈ ಕಥೆಗಾರ ಇನ್ನೇನೂ ಮಾಡಿರುವುದಿಲ್ಲ. ಅವಳೂ ಅದನ್ನ ಬಯಸಿರಲಿಲ್ಲವಾದರೂ ಅವಳಿಗೆ ತನ್ನ ಸಾಮೀಪ್ಯ ಬೇಕಿತ್ತೆಂಬುದು ಕಥೆಗಾರನ ಖಚಿತವಾದ ತಿಳಿವಳಿಕೆ. ಅವಳು ತನ್ನೂರಿಗೆ ಮರಳಿದ ನಂತರ ಒಂದೆರಡು ಪತ್ರಗಳನ್ನು ಬರೆಯುತ್ತಾಳೆ. ಪ್ರೇಮಪತ್ರಗಳಲ್ಲವಾದರೂ ಬೆಚ್ಚನೆಯ ಪತ್ರಗಳು. ಇವನು ಒಬ್ಬ 'ಗೃಹಿಣಿ-ಗೆಳತಿಗೆ' ಹೇಗೆ ಬರೆಯಬಹುದೋ ಹಾಗೆ ಬರೆದು ಪತ್ರ ಹಾಕಿ ಉತ್ತರಕ್ಕೆ ಕಾಯುತ್ತಿದ್ದನಂತೆ.

ಇನ್ನೊಬ್ಬಳು ಸೆಮಿನಾರಿನ ಕೊನೆದಿನಗಳಲ್ಲಿ ಈ ಕಥೆಗಾರನಿಗೆ ತುಂಬ ಸಮೀಪ ಆದಳು. ಆದರೆ, ಗೃಹಿಣಿ ಯಾವಾಗಲೂ ಇವಳ ಜತೇಲಿ ಇರುತ್ತಿದ್ದಳು. ಅಂದ್ರೆ ಗೃಹಿಣಿ ಎಷ್ಟು ಕಾಂಪ್ಲೆಕ್ಸ್ ವ್ಯಕ್ತಿ ಅನ್ನುವುದು ಕಥೆಗಾರನ ಚಿಂತೆ! ಒಂದು ದಿನ ಇವನು ಇವಳ ಕೋಣೆಗೆ ಹೋಗುತ್ತಾನೆ; ಅದು ಪ್ರಥಮ ಬಾರಿ ಹೋದದ್ದು. ಕಥೆಗಾರನಿಗೆ ಇವಳ ಜತೆ ಏಕಾಂತ ಬೇಕಿತ್ತಂತೆ. ಆದರೆ, ಗೃಹಿಣಿ ಇವನನ್ನು ಹುಡುಕಿಕೊಂಡು ಅಲ್ಲಿಗೇ ಬಂದುಬಿಟ್ಟಳಂತೆ! ಇವಳೂ ಊರಿಗೆ ಮರಳಿದ ನಂತರ ಕಥೆಗಾರನಿಗೆ ಎರಡು ಪತ್ರಗಳನ್ನು ಬರೆದಳಂತೆ. ಉತ್ತರಿಸುತ್ತ ಇವನು, ಏನೇನೋ ಹುಚ್ಚುಚ್ಚಾಗಿ ಬರೆದನಂತೆ! ಅದರಿಂದ ಇವಳ ಮೇಲೆ ಏನು ಪರಿಣಾಮವಾಗಿದೆಯೋ, ಅವಳಿಂದ ಸುದ್ದಿಯೇ ಇಲ್ಲವೆಂದು ಕಾಯುತ್ತಿದ್ದಾನಂತೆ. ಸೆಮಿನಾರ್ ನಡೆದ ಊರಿನಲ್ಲಿ ಇವಳ ತುಟಿಗೆ ಮುತ್ತು ಕೊಟ್ಟಾಗ ಇವಳೂ ಕೂಡ ತುಟಿಗೆ ತುಟಿ ನೀಡಿದ್ದಳಂತೆ. ಈಗ ಇವಳು ರಾಣಿಬೆನ್ನೂರಿನಲ್ಲಿ! ಇವನು ಮೈಸೂರಿನಲ್ಲಿ! ಇವಳಿಗೆ ಈ ಸಂಬಂಧ ಮುಂದುವರಿಯೋದು ಇಷ್ಟ ಇದೆಯೋ ಇಲ್ವೋ ಎಂಬುದು ಸ್ಪಷ್ಟವಾಗದೆ 'ಆಹಾ! ಮನುಷ್ಯ ಜೀವನವೆ!' ಎಂದು ಪರಿತಪಿಸುತ್ತ ಕಥೆಗಾರ ನೇರವಾಗಿ ತನ್ನ ಹೆಂಡತಿಯ ಬಳಿಗೆ ಹೋಗಿ ಹೀಗೆ ಹೇಳಿದನಂತೆ; 'ನೋಡು! ನಾನು ದೇವರು. ಈ ಅವತಾರ ಮುಗಿಸಿ ಇನ್ನೊಂದು ಅವತಾರ ಎತ್ತಬೇಕೆಂತ ಇದ್ದೇನೆ' ಅಂದನಂತೆ. ಆಕೆ ಇವನು ಹುಚ್ಚ ಅಂತ ಎಂದೋ ತೀರ್ಮಾನಿಸಿರುವವರಂತೆ!

ತಿರುಮಲೇಶ್, 'ಕಥೆಗಾರನ ಈ ಭಾನಗಡಿಯ ವಿವರಗಳು ಇನ್ನೂ ಸಾಕಷ್ಟಿವೆ. ಎಲ್ಲವನ್ನೂ ಬರೆಯುವುದಕ್ಕಾಗಲ್ಲ, ನೀವು ಮುಂದಿನ ಸಲ ಹೈದರಾಬಾದಿಗೆ ಬಂದಾಗ ಹೇಳ್ತೀನಿ' ಎಂದು ಪತ್ರದಲ್ಲಿ ತಿಳಿಸಿ, ಮೈಸೂರಿನ ಆ ಕಥೆಗಾರರಿಗೆ 'ನಿಮ್ಮ ಅನುಭವ ನಿರರ್ಥಕವಾಗಬಾರದು, ಒಂದು ಕಾದಂಬರಿ ಬರೆಯಿರಿ' ಎಂದು ಒಂದು ಸಾಂತ್ವನ ಪತ್ರ ಬರೆದೆನೆಂದು ತಿಳಿಸಿದ್ದಾರೆ.

ಅವರ ಸಂಪರ್ಕಕ್ಕೆ ಬಂದವರಿಗೆಲ್ಲ ಮನವರಿಕೆಯಾಗುತ್ತಿದ್ದ ಮುಖ್ಯ ವಿಷಯವೆಂದರೆ ಅವರ ಬಾಹ್ಯ ಮತ್ತು ಅಂತರಂಗದ ಸರಳತೆ. ಅತ್ಯಂತ ಸರಳ ಜೀವನವನ್ನು ಆಯ್ಕೆ ಮಾಡಿಕೊಂಡವರು ಅವರು. ಸರಳವಾದ ಉಡುಪು, ಸರಳವಾದ ಕ್ಯಾನ್ವಾಸ್ ಶೂ, ಮನೆಯಲ್ಲಿ ಅಗತ್ಯಕ್ಕಿಂತ ಸ್ವಲ್ಪ ಕಡಿಮೆಯೇ ಅನಿಸುವಷ್ಟು ಸರಳವಾದ ಫರ್ನಿಚರ್ ಇರುತ್ತಿತ್ತು. ಅದರಲ್ಲಿ ಅವರು ಕಂಡಿದ್ದ, ಕಾಣುತ್ತಿದ್ದ ಆನಂದವನ್ನು ಯಾರಾದರೂ ಗುರುತಿಸಬಹುದಿತ್ತು. ಇವರು ನಮಗೆ ಬಿಟ್ಟುಹೋಗಿರುವ ಸಾಹಿತ್ಯವನ್ನು ಮನನ ಮಾಡುವುದು ಕನ್ನಡದ ಪುಷ್ಟಿಯ ದೃಷ್ಟಿಯಿಂದ ಅತ್ಯಂತ ಅಗತ್ಯವಾದುದು. ●